<u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 483 |
| ಸದಸ್ಯರ ಹೆಸರು | : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 12-12-2018 |
| ಉತ್ತರಿಸುವ ಸಚಿವರು | : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಸಕ್ಕರೆ, ಐ.ಟಿ.ಬಿ.ಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಬ್ಬಿನ ಬೆಳೆಗೆ ನೀರಿನ ಕೊರತೆ, ರೋಗಭಾದೆ, ವೈಜ್ಞಾನಿಕ ಬೆಲೆಯಿಲ್ಲದ್ದು ಹಾಗೂ ಕಾರ್ಖಾನೆಗಳು ಕಬ್ಬು ಪಡೆದು ಹಣ ಪಾವತಿಸಲು ವಿಳಂಬ ಮಾಡುತ್ತಿರುವುದು ಮುಂತಾದ ಕಾರ್ಖಾನೆಗಳಿಂದ ರೈತರು ಕಬ್ಬು ಬೆಳೆ ಬೆಳೆಯಲು ಹಿಂದೇಟು ಹಾಕುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ಕಬ್ಬು ಬೆಳೆದಿರುವುದು ಹಾಗೂ ಕಬ್ಬು ಉತ್ಪಾದನಾ ವಿವರ ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಕಬ್ಬು ಬೆಳೆದಿರುವ ಪ್ರದೇಶ (ಲಕ್ಷ ಹೆಕ್ಟೇರ್)</th><th>ಕಬ್ಬು ಉತ್ಪಾದನೆ (ಲಕ್ಷ ಮೆ.ಟನ್‌ಗಳಲ್ಲಿ)</th><th>ಉತ್ಪಾದನೆ ಪ್ರತಿ ಹೆಕ್ಟೇರ್‌ಗೆ (ಮೆ.ಟನ್‌ಗಳಲ್ಲಿ)</th></tr>
<tr><td>2014-15</td><td>4.80</td><td>480</td><td>100</td></tr>
<tr><td>2015-16</td><td>4.50</td><td>383</td><td>85</td></tr>
<tr><td>2016-17</td><td>4.20</td><td>286</td><td>68</td></tr>
<tr><td>2017-18</td><td>4.00</td><td>380</td><td>95</td></tr>
<tr><td>2018-19</td><td>4.80</td><td>450</td><td>95</td></tr>
</table>
2015-16 ಹಾಗೂ 2016-17ನೇ ವರ್ಷಗಳಲ್ಲಿ ರಾಜ್ಯದಲ್ಲಿ ಉಂಟಾದ ಬರಗಾಲದ ಕಾರಣ ನೀರಿನ ಕೊರತೆಯಿಂದಾಗಿ ಕಬ್ಬು ಬೆಳೆಯುವ ಪ್ರದೇಶ ಮತ್ತು ಉತ್ಪಾದನಾ ಪ್ರಮಾಣದಲ್ಲಿ ಕಡಿಮೆಯಾಗಿರುತ್ತದೆ. ಆದರೆ 2017-18ರಲ್ಲಿ ಉತ್ಪಾದನಾ ಪ್ರಮಾಣ ಹೆಚ್ಚಾಗಿರುತ್ತದೆ. 2018-19 ರಲ್ಲಿ ಕಬ್ಬು ಪ್ರದೇಶ ಮತ್ತು ಕಬ್ಬು ಉತ್ಪಾದನೆ ಎರಡರಲ್ಲೂ ಏರುಮುಖವಾಗಿದೆ. ರಾಜ್ಯದಲ್ಲಿ ನೀರಿನ ಕೊರತೆ, ರೋಗ ಭಾದೆ, ವೈಜ್ಞಾನಿಕ ಬೆಲೆ ಇಲ್ಲದಿರುವುದು ಹಾಗೂ ಕಾರ್ಖಾನೆಗಳು ಕಬ್ಬಿನ ದರ ಪಾವತಿಸುವಲ್ಲಿ ವಿಳಂಬ ಮಾಡುತ್ತಿವೆ ಎಂಬ ಕಾರಣಕ್ಕಾಗಿ ರೈತರು ಕಬ್ಬು ಬೆಳೆಯಲು ಹಿಂದೇಟು ಹಾಕುತ್ತಿದ್ದಾರೆ ಎಂಬ ಪ್ರಕರಣಗಳು ವರದಿಯಾಗಿರುವುದಿಲ್ಲ. ಮುಖ್ಯವಾಗಿ ನೀರಿನ ಕೊರತೆ ಇರುವ ವರ್ಷಗಳಲ್ಲಿ ಕಬ್ಬು ಬೆಳೆಯುವ ಪ್ರದೇಶ ಮತ್ತು ಕಬ್ಬು ಉತ್ಪಾದನೆಯಲ್ಲಿ ಇಳಿಮುಖವಾಗಿರುತ್ತದೆ.</td></tr>
<tr><td></td><td>ಹಾಗಿದ್ದಲ್ಲಿ, ಕಬ್ಬು ಬೆಳೆಗಾರರಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮ ಗಳೇನು; ಕಬ್ಬು ಬೆಳೆಯುವುದರಲ್ಲಿ ನಮ್ಮ ರಾಜ್ಯವು ದೇಶದ ಎಷ್ಟನೇ ಸ್ಥಾನದಲ್ಲಿದೆ;</td><td>ಕಬ್ಬು ಬೆಳೆಯುವುದರಲ್ಲಿ ನಮ್ಮ ರಾಜ್ಯವು ದೇಶದಲ್ಲಿಯೇ 3ನೇ ಸ್ಥಾನದಲ್ಲಿದೆ. ರಾಜ್ಯದ ಕಬ್ಬು ಬೆಳೆಗಾರ ರೈತರ ಆದಾಯ ಹೆಚ್ಚಿಸಬೇಕು ಎಂಬುದನ್ನು ಹಾಗೂ ಪ್ರತಿ ಹೆಕ್ಟೇರ್ ಕಬ್ಬು ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವ ಮತ್ತು ಸಕ್ಕರೆ ಇಳುವರಿ ಪ್ರಮಾಣವನ್ನು ಹೆಚ್ಚಿಸಬೇಕು ಎಂಬ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ರಾಜ್ಯ ಸರ್ಕಾರವು 2018-19ನೇ ಆಯ-ವ್ಯಯದಲ್ಲಿ ರೂ.5.00 ಕೋಟಿಗಳ ಅನುದಾನವನ್ನು ಒದಗಿಸಿದೆ. ಈ ಅನುದಾನದಲ್ಲಿ "ಕಬ್ಬು ಉತ್ಪಾದನೆ ಮತ್ತು ಸಕ್ಕರೆ ಇಳುವರಿಯನ್ನು ಹೆಚ್ಚಿಸಲು ಹೊಸ ತಳಿಗಳ ಅಭಿವೃದ್ಧಿಗೆ ಆರ್ಥಿಕ ಸಹಾಯ" ಎಂಬ ಯೋಜನೆಯನ್ನು ಕೈಗೆತ್ತಿಕೊಂಡು ಪ್ರಾಥಮಿಕವಾಗಿ ಬೆಳಗಾವಿ, ಬೀದರ್, ಮತ್ತು ಮಂಡ್ಯ ಜಿಲ್ಲೆಗಳಿಗೆ ಯೋಜನೆಯನ್ನು ವಿಸ್ತರಿಸಲಾಗಿದೆ. ಈ ಜಿಲ್ಲೆಯ ಕಬ್ಬು ಬೆಳೆಗಾರ ರೈತರು ಹೊಸದಾಗಿ ಅಭಿವೃದ್ಧಿಪಡಿಸಿದ ಉತ್ತಮ ತಳಿಯ ಕಬ್ಬು ನಾಟಿ ಮಾಡಿ ಬೆಳೆಯುವವರಿಗೆ ಶೇ.50 ರಷ್ಟು ಸಹಾಯಧನ ಒದಗಿಸಲು ಅವಕಾಶ ಕಲ್ಪಿಸಲಾಗಿದೆ. ಈ ಸಂಬಂಧ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ದೇಶನಗಳನ್ನು ನೀಡಲಾಗಿದೆ.</td></tr>
</table>

| | | |
|---|---|---|
| ಇ) | 2015-16 ಹಾಗೂ 2016-17ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ಹೆಕ್ಟೇರ್-ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿತ್ತು; 2017-18ನೇ ಸಾಲಿನಲ್ಲಿ ಎಷ್ಟು ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿದೆ; | ಈ ಪ್ರಶ್ನೆಗೆ ಸಂಬಂಧಿಸಿದ ಉತ್ತರ ಮೇಲ್ಕಂಡ ಉಪ ಪ್ರಶ್ನೆ 'ಅ' ರಲ್ಲಿ ಉತ್ತರಿಸಲಾಗಿದೆ. |
| ಈ) | ಸರ್ಕಾರವು ರೈತರ ಕಬ್ಬು ಬೆಳೆಗೆ ಪ್ರತಿ ಟನ್‌ಗೆ ವೈಜ್ಞಾನಿಕವಾಗಿ ಕೇಂದ್ರ ಸರ್ಕಾರದ ಎಫ್‌ಆರ್‌ಪಿ ದರದನ್ವಯ ಎಷ್ಟು ಬೆಲೆ ನಿಗಧಿಪಡಿಸಲಾಗಿದೆ; ಈ ಬಗ್ಗೆ ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆ; ವೈಜ್ಞಾನಿಕ ಎಫ್.ಆರ್‌ಪಿ ದರ ಯಾವಾಗ ಜಾರಿಯಾಗುವುದು; | ಕೇಂದ್ರ ಸರ್ಕಾರವು 2018-19ನೇ ಹಂಗಾಮಿಗೆ ಎಫ್‌ಆರ್‌ಪಿ ಯನ್ನು ನಿಗದಿಗೊಳಿಸಿ ಘೋಷಿಸಿರುತ್ತದೆ. ಅದರಂತೆ ಶೇ.10ರ ಸಕ್ಕರೆ ಇಳುವರಿಗೆ ಪ್ರತಿ ಮೆ.ಟನ್ ಕಬ್ಬಿಗೆ ರೂ.2750/- ಎಂದು ನಿಗದಿಗೊಳಿಸಲಾಗಿದೆ. ಈ ದರವು ಪ್ರತಿ ಶೇ.1.0/-ರ ಸಕ್ಕರೆ ಇಳುವರಿಯ ಹೆಚ್ಚಿನ ಪ್ರಮಾಣಕ್ಕೆ ರೂ.275/- ಏರಿಕೆಯಾಗಲಿದೆ. ಹಾಗೆಯೇ ಶೇ.10/- ಮತ್ತು ಶೇ.9.5/-ರ ನಡುವಿನ ಸಕ್ಕರೆ ಇಳುವರಿಗೆ ಪ್ರತಿ ಶೇ.1.0/- ಸಕ್ಕರೆ ಇಳುವರಿ ಕೊರತೆಗೆ ರೂ.275/-ಗಳ ಕಡಿತಗೊಳಿಸುವ ಪ್ರಮಾಣದಲ್ಲಿ ಘೋಷಣೆಯಾಗಿರುತ್ತದೆ. ಅದರಂತೆ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳ 2017-18ನೇ ಸಾಲಿನ ಸಕ್ಕರೆ ಇಳುವರಿ ಯನ್ನಾಧಾರವಾಗಿಟ್ಟುಕೊಂಡು ದಿನಾಂಕಃ20-08-2018 ರಂದು ನಡೆದ ಕಬ್ಬು ನಿಯಂತ್ರಣ ಮಂಡಳಿಯ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ದಿನಾಂಕಃ03-10-2018 ರಂದು ಅಧಿಸೂಚನೆ ಹೊರಡಿಸಿ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ನಿರ್ದೇಶನಗಳನ್ನು ನೀಡುವ ಮೂಲಕ ಈಗಾಗಲೇ ಜಾರಿಗೊಳಿಸಲಾಗಿದೆ. |
| ಉ) | ಕಾರ್ಖಾನೆಗಳು ರೈತರ ಕಬ್ಬಿನ ಬಾಕಿ ಹಣ ಪಾವತಿಸದೇ ವರ್ಷಾನುಗಟ್ಟಲೆ ಅಲೆಸುತ್ತಿರುವವರ ವಿರುದ್ಧ ಕೈಗೊಳ್ಳಲು ಉದ್ದೇಶಿಸಿರುವ ಕ್ರಮ ಗಳೇನು; ರೈತರಿಗೆ ಪಾವತಿಸಲು ಬಾಕಿ ಉಳಿಸಿ ಕೊಂಡಿರುವ ಕಾರ್ಖಾನೆಗಳು ಯಾವುವು; ಒಟ್ಟು ಬಾಕಿ ಇರುವ ಮೊತ್ತವೆಷ್ಟು; ಯಾವಾಗ ಪೂರ್ಣ ಪಾವತಿಸಲಾಗುವುದು? (ವಿವರ ಒದಗಿಸುವುದು) | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಲು ಬಾಕಿ ಉಳಿಸಿಕೊಂಡಿರುವ ಕಳೆದ 05 ವರ್ಷಗಳ ವಿವರ ದಿನಾಂಕ 30.11.2018ಕ್ಕೆ ಇದ್ದಂತೆ ಈ ಕೆಳಕಂಡಂತಿದೆ: (ತಃಖ್ತೆ ಕೆಳಗೆ) |

ರೂ. ಕೋಟಿಗಳಲ್ಲಿ

| ಕ್ರ. ಸಂ | ವರ್ಷ | ಪಾವತಿಸ ಬೇಕಾದ್ದು | ಪಾವತಿಸಿರುವುದು | ಬಾಕಿ | ಶೇಕಡವಾರು ಬಾಕಿ |
|---|---|---|---|---|---|
| 1 | 2013-14 | 9578.56 | 9576.96 | 1.60 | 0.02 |
| 2. | 2014-15 | 11449.14 | 11448.69 | 0.45 | 0.01 |
| 3. | 2015-16 | 10143.14 | 10122.30 | 20.84 | 0.21 |
| 4. | 2016-17 | 5343.07 | 6702.84 | 0.00 | 0.00 |
| 5. | 2017-18 | 9851.83 | 10516.11 | 17.24 | 0.17 |

ಬಾಕಿ ಉಳಿಸಿಕೊಂಡಿರುವ ಕಾರ್ಖಾನೆಗಳ ವಿವರ ಈ ಕೆಳಕಂಡಂತಿದೆ:

ಎ) 2013-14ನೇ ಸಾಲಿನಲ್ಲಿ ಐಎಸ್‌ಆರ್ ಶುಗರ್ಸ್ ಬಳ್ಳಾರಿ -ರೂ.1.60 ಕೋಟಿ
ಬಿ) 2014-15ನೇ ಸಾಲಿನಲ್ಲಿ ಐಎಸ್‌ಆರ್ ಶುಗರ್ಸ್ ಬಳ್ಳಾರಿ -ರೂ.0.45 ಕೋಟಿ
ಸಿ) 2015-16ನೇ ಸಾಲಿನಲ್ಲಿ ಐಎಸ್‌ಆರ್ ಶುಗರ್ಸ್ ಬಳ್ಳಾರಿ -ರೂ.9.47 ಕೋಟಿ
ಶಿವಸಾಗರ ಶುಗರ್ಸ್ ಬೆಳಗಾವಿ -ರೂ.11.37 ಕೋಟಿ
ಡಿ) 2017-18ನೇ ಸಾಲಿನಲ್ಲಿ ಬಾಕಿ ಉಳಿಸಿಕೊಂಡಿರುವ ಮೂರು ಕಾರ್ಖಾನೆಗಳ ವಿವರಃ

1. ಮಲಪ್ರಭಾ ಸಸಕಾ ಬೆಳಗಾಂ – ರೂ.5.24 ಕೋಟಿ
2. ನಾರಂಜಾ ಸಸಕಾ ಬೀದರ್ – ರೂ.5.85 ಕೋಟಿ
3. ಭಾಲ್ಕೇಶ್ವರ ಶುಗರ್ಸ್ ಬೀದರ್ – ರೂ.6.15 ಕೋಟಿ

ಈ ಎಲ್ಲಾ ಕಾರ್ಖಾನೆಗಳ ವಿರುದ್ಧ ವಸೂಲಾತಿ ಪ್ರಮಾಣ ಪತ್ರ ಹೊರಡಿಸಿದ್ದು ವಸೂಲಾತಿ ಕ್ರಮ ಜರುಗಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

**ಸಂಖ್ಯೆ: ಸಿಐ 113 ಎಸ್‌ಜಿಎಫ್ 2018**

(ಕೆ.ಜೆ.ಜಾರ್ಜ್)
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ,
ಸಕ್ಕರೆ, ಐ.ಟಿ.ಬಿ.ಟಿ ಹಾಗೂ ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು